# ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸಂಡೂರು.

**ಸಿ.ಸಿ. ನಂಬರು ಃ 359 –2016** **ಸಿಡಬ್ಲ್ಯುಃ 18 ಪಿಡಬ್ಲ್ಯುಃ 06**

| | | |
|---|---|---|
| ಸಾಕ್ಷಿಯ ಹೆಸರು | : ಮಲ್ಲೇಶ ದೊಡ್ಡಮನಿ | ದಿನಾಂಕಃ 21-11-2019 |
| .ತಂದೆಯ/ಗಂಡನ ಹೆಸರು | : ಫಕೀರನಾಯ್ಕ | ರಂದು ಪ್ರಮಾಣ |
| ವಯಸ್ಸು | : 42 ವರ್ಷ | ವಚನ ಮಾಡಿಸಲಾಯಿತು |
| ಉದ್ಯೋಗ | : ಡಿ ಎಸ್ ಪಿ | |
| ವಾಸಸ್ಥಳ | : ಹರಪ್ಪನಹಳ್ಳಿ | |

ಮುಖ್ಯ ವಿಚಾರಣೆ ಃ

ನಾನು ಸಂಡೂರು ಠಾಣೆಯಲ್ಲಿ ದಿ 8-5-2015 ರಿಂದ 20-10-2016 ರವರೆಗೆ ವೃತ್ತ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೆನೆ.

ಈ ಪ್ರಕರಣದ ತನಿಖೆಯನ್ನು ದಿ 09-09-2015 ರಂದು ಚಾಸ 17 ರವರಿಂದ ಪಡೆದುಕೊಂಡಿರುತ್ತೇನೆ. ಅದೇ ದಿನ ಚಾಸ 04 ಮತ್ತು 05 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ದಿನಾಂಕ 25-12-2015 ರಂದು ಚಾಸ 11, 12, 13 ರವರು ಆರೋಪಿಯನ್ನು ತಂದು ಹಾಜರುಪಡಿಸಿದ್ದು, ಆರೋಪಿತನನ್ನು ವಿಚಾರಣೆ ಮಾಡಿ ಆತನು ನೀಡಿದ ಸ್ವಖುಷಿ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿನಾಂಕ 26-12-2015 ರಂದು ಚಾಸ 6, 7, ಮತ್ತು 10 ರವರ ಸಮಕ್ಷಮ ಆರೋಪಿತರಿಂದ ಮಾಲು ಜಪ್ತು ಪಂಚನಾಮೆಯನ್ನು ಮಾಡಿಕೊಂಡಿರುತ್ತೇನೆ. ಅದೇ ದಿನ ಚಾಸ 1 ಮತ್ತು 4 ರವರ ಮರು ಹೇಳಿಕೆಗಳನ್ನು ಮತ್ತು ಚಾಸ 9 ರವರ ಹೇಳಿಕೆಯನ್ನು ಪಡೆದಿರುತ್ತೇನೆ. ದಿನಾಂಕ 26-12-2015 ರಂದು ಆರೋಪಿ ತೋರಿಸಿದ ಕೃತ್ಯ ಸ್ಥಳದ ಪಂಚನಾಮೆಯನ್ನು ಚಾಸ 6 ಮತ್ತು 8 ರವರ ಸಮಕ್ಷಮ ಮಾಡಿರುತ್ತೇನೆ. ದಿನಾಂಕ 27-12-2015 ರಂದು ಚಾಸ 05 ರವರ ಮರು ಹೇಳಿಕೆಗಳನ್ನು ಪಡೆದಿರುತ್ತೇನೆ. ದಿನಾಂಕ 10-01-2016 ರಂದು ಚಾಸ 10 ರಿಂದ 16 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ಆರೋಪಿಯ ವಿರುದ್ಧ ಸಾಕಷ್ಟು ಸಾಕ್ಷಾಧಾರ ಕಂಡು ಬಂದಿದ್ದರಿಂದ ದೋಷಾರೋಪಣಾ ಪತ್ರ ಸಲ್ಲಿಸಿರುತ್ತೇನೆ.

ಆರೋಪಿ ಹಾಜರುಪಡಿಸಿದ ಮಾಲು ಜಪ್ತು ಮಾಡಿದ ಸಮಯದಲ್ಲಿ ಪಂಚನಾಮೆಯಲ್ಲಿನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 5 ಸಿ ಎಂದು ಗುರುತಿಸಲಾಯಿತು. ಘಟನಾ ಸ್ಥಳದ ಪಂಚನಾಮೆ ಮಾಡುವ ಕಾಲಕ್ಕೆ ತೆಗೆದ ಫೋಟೋ ನೋಡಿ ಗುರುತಿಸಿದ್ದು ಅದನ್ನು ನಿಪಿ 7 ಎಂದು. ಆರೋಪಿಯು ಆಭರಣಗಳನ್ನು ನೀಡಿದ ಸಮಯದಲ್ಲಿ ತೆಗೆದ ಫೋಟೋ ನೋಡಿ ಗುರುತಿಸಿದ್ದು ಅದನ್ನು ನಿಪಿ 8 ಎಂದು ಗುರುತಿಸಲಾಯಿತು. ಆಭರಣಗಳ ಫೋಟೋಗಳನ್ನು ನೋಡಿ ಗುರುತಿಸುತ್ತೇನೆ. ಆರೋಪಿಯನ್ನು ನೋಡಿ ಗುರುತಿಸುತ್ತೇನೆ.

ಪಾಟಿ ಸವಾಲು ಃ ಶ್ರೀ ಕೆ ಟಿ ಪಿ ವಕೀಲರಿಂದ

ಆರೋಪಿತನು ತೋರಿಸಿದ ಮನೆಗಳ ನಂಬರಗಳನ್ನು ಪಂಚನಾಮೆಯಲ್ಲಿ ಸೇರಿಸಿದ್ದೀರಾ ಎಂದರೆ ಸಾಕ್ಷಿಯು ಕೆಲವು ನಂಬರಗಳನ್ನು ಸೇರಿಸಿದ್ದೇನೆಂದು ನುಡಿಯುತ್ತಾರೆ. ಘಟನಾ ಸ್ಥಳದ ಮನೆಗಳ ಖಾತಾ ಎಕ್ಸ್ಟ್ರಾಕ್ಟಗಳನ್ನು ಹಾಜರುಪಡಿಸಿರುವುದಿಲ್ಲ. ಚಾಸ 06 ಮತ್ತು 08 ರವರ ಸಮಕ್ಷಮ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ. ಪಂಚನಾಮೆಗಳಿಗೆ ನಮ್ಮ ಠಾಣೆಯಲ್ಲಿ ಕುಳಿತು ಸಹಿ ಪಡೆದಿದ್ದೇವೆಂದರೆ ಸರಿಯಲ್ಲ. ಆರೋಪಿಯು ನಮ್ಮನ್ನು ಯಾವುದೇ ಸ್ಥಳಕ್ಕೆ ಕರೆದುಕೊಂಡು ಹೋಗಿಲ್ಲ ಮತ್ತು ಆತ ತೋರಿಸಿದ ಸ್ಥಳದಲ್ಲಿ ನಾವು ಯಾವುದೇ ಪಂಚನಾಮೆ ಮಾಡಿಲ್ಲ ಎಂದರೆ ಸರಿಯಲ್ಲ.

ಚಾಸ 10 ರಿಂದ 14 ರವರ ಹೇಳಿಕೆಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ಆರೋಪಿ ಯಾವುದೇ ತಪ್ಪು ಮಾಡದೇ ಇದ್ದರೂ ಅವರ ವಿರುದ್ದ ಸರಿಯಾಗಿ ತನಿಖೆ ಮಾಡದೇ ಸುಳ್ಳು ದೋಷಾರೋಪಣಾ ಪತ್ರ ಸಲ್ಲಿಸಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು. )

ಓ ಹೇ ಕೇ ಸ ಇದೆ.

ಪ್ರ.ದ.ನ್ಯಾ.ದಂ; ಸಂಡೂರು.

ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ
ನ್ಯಾಯಾಲಯ, ಸಂಡೂರು.

**ಸಿ.ಸಿ. ನಂಬರು ಃ 359 – 2016.** **ಸಿಡಬ್ಲ್ಯು ಃ 08, ಪಿಡಬ್ಲ್ಯು ಃ 07**

| | | |
|---|---|---|
| ಸಾಕ್ಷಿಯ ಹೆಸರು | : ಪೆರುಮಳೇಶ್ವರನ್ | ದಿನಾಂಕ ಃ **21-11-2019** |
| ತಂದೆಯ/ ಗಂಡನ ಹೆಸರು | : ಜಾಕೋಬ್ | ರಂದು ಪ್ರಮಾಣ |
| ವಯಸ್ಸು | : **51** ವರ್ಷ | ವಚನ |
| ಉದ್ಯೋಗ | : ಕೂಲಿ ಕೆಲಸ | ಮಾಡಿಸಲಾಯಿತು |
| ವಾಸಸ್ಥಳ | : ತೋರಣಗಲ್ಲು | |

ಮುಖ್ಯ ವಿಚಾರಣೆ ಃ

* * * *

ನನಗೆ ಚಾಸ **07** ರವರ ಪರಿಚಯವಿರುತ್ತದೆ. ಈಗ **3** ವರ್ಷದ ಹಿಂದೆ ನಾನು ಠಾಣೆಗೆ ನನ್ನ ಕೆಲಸದ ನಿಮಿತ್ಯ ಹೊದಾಗ ಪೋಲಿಸರು ನನ್ನಿಂದ ಒಂದು ದಾಖಲೆಗೆ ಸಹಿ ಪಡೆದಿರುತ್ತಾರೆ. ಸದರಿ ದಾಖಲೆಯು ಈಗ ತೋರಿಸಿದ ಪಂಚನಾಮೆಯಾಗಿದ್ದು, ಸಾಕ್ಷಿ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲಾತಿಯು ಜಾರಾಕ್ಸ ಪ್ರತಿಯಾದ್ದರಿಂದ ಗುರುತಿಸಲಾಗಿರುವುದಿಲ್ಲ. ಅದರಲ್ಲಿ ಬರೆದ ಮಾಹಿತಿ ನನಗೆ ಇರುವುದಿಲ್ಲ.

ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲನ್ನು ಮಾಡಲು ಮಾನ್ಯ ಸ.ಸ.ಅ. ರವರು ಅನುಮತಿ ಕೋರಿರುತ್ತಾರೆ, ಅನುಮತಿಸಲಾಯಿತು

ಪಾಟೀ ಸವಾಲುಃ ಮಾನ್ಯ ಸ.ಸ.ಅ. ರವರಿಂದ.

ದಿನಾಂಕ ಃ **26-12-2015** ರಂದು ಬೆಳಿಗ್ಗೆ **6.00** ರಿಂದ **10.00** ಗಂಟೆಯವರೆಗೆ ಪೋಲೀಸರು ನನ್ನ ಹಾಗೂ ಚಾಸ **07** ರವರ ಸಮಕ್ಷಮ ಪೋಲೀಸರು ಆರೋಪಿ ತೋರಿಸಿದ ಸ್ಥಳಗಳಲ್ಲಿ ಪಂಚನಾಮೆ ಮಾಡಿ ಸ್ಥಳದಲ್ಲಿಯೆ ನನ್ನ ಸಹಿ ಪಡೆದಿದ್ದಾರೆ ಎಂದರೆ ಸರಿಯಲ್ಲ. ಪಂಚನಾಮೆಗೆ ಸಹಿ ಮಾಡಿದ್ದರೂ ಕೂಡಾ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆಂದರೆ ಸರಿಯಲ್ಲ.

ಪಾಟಿ ಸವಾಲು ಃ ಆರೋಪಿ ಪರ ವಕೀಲರಿಂದ ಏನು ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ.

ಪ್ರ.ದ.ನ್ಯಾ.ದಂ, ಸಂಡೂರು.